ಪಾಲಿಟೆಕ್ನಿಕ್ ಶಿಕ್ಷಕರಿಗೂ ಕಾಲಮಿತಿ ಪದೋನ್ನತಿ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ

೨೨ (೧೪೧) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕಾಲಮಿತಿ ಪದೋನ್ನತಿಯನ್ನು ಶಿಕ್ಷಣದ ಯಾವ ಯಾವ ಇಲಾಖೆಗಳಿಗೆ ವಿಸ್ತರಿಸಲಾಗಿದೆ ?

ಆ) ಈ ವ್ಯಾಪ್ತಿಗೆ ಪಾಲಿಟೆಕ್ನಿಕ್ ಶಿಕ್ಷಕರನ್ನು ಸಹ ಒಳಪಡಿಸಲು ಶಿಫಾರಸ್ಸು ಹಾಗೂ ಮನವಿ ಗಳನ್ನು ಏನಾದರೂ ಸರ್ಕಾರದವರು ಸ್ವೀಕರಿಸುವರೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಮಂತ್ರಿಯವರು).—

ಅ) ಶಿಕ್ಷಣ ಇಲಾಖೆಯ ವಿಶ್ವ ವಿದ್ಯಾಲಯಗಳು, ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗಳಲ್ಲಿ ಕಾಲೇಜು ಮಟ್ಟದಲ್ಲಿ ಲೆಕ್ಚರರ್ ಹುದ್ದೆಯಿಂದ ಅಸಿಸ್ಟೆಂಟ್ ಪ್ರೊಫೆಸರ್ ಅಥವಾ ರೀಡರ್ಸ್ ಹುದ್ದೆಗೆ ಮಾತ್ರ ಕಾಲಮಿತಿ ಪದೋನ್ನತಿಯನ್ನು ಜಾರಿಗೆ ತರಲಾಗಿದೆ.

ಆ) ಈ ಬಗ್ಗೆ ಕರ್ನಾಟಕ ಪಾಲಿಟೆಕ್ನಿಕ್ ಶಿಕ್ಷಕ ಸಂಘವು ಮನವಿ ಮಾಡಿಕೊಂಡಿತ್ತು.

ಇ) ಸೂಕ್ತ ಪ್ರಸ್ತಾವನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ತರಿಸಿಕೊಂಡು ಪರಿಶೀಲಿಸಲಾಗುವುದು.

ಪೀಠೋಪಕರಣಗಳ ಬಗ್ಗೆ

೨೩ (೧೭೬) ಶ್ರೀ ಪಿ. ಬಿ. ಓಂಕಾರ ಮೂರ್ತಿ (ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕಡೂರು ಕ್ಷೇತ್ರದ ಕಡೂರು, ಜೇಳಹಿರಿಯೂರು, ಯಗಟಿ, ಪಂಚನಹಳ್ಳಿಗಳಲ್ಲಿನ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ವಿಜ್ಞಾನ ಉಪಕರಣ ಪೀಠೋಪಕರಣ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ೧೯೮೭–೮೮ನೇ ಸಾಲಿನಲ್ಲಾದರೂ ಪೀಠೋಪಕರಣ, ವಿಜ್ಞಾನ ಉಪಕರಣ ಗಳನ್ನು ಸರಬರಾಜು ಮಾಡಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ೧೯೮೭–೮೮ರ ಸಾಲಿಗೆ ಒದಗಿಸಲಾಗುವುದು.

ಅನಗವಾಡಿ ಸೇತುವೆಯ ನಿರ್ಮಾಣದ ಬಗ್ಗೆ

೨೪ (೫೬) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹುಬ್ಬಳ್ಳಿ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ಘಟಪ್ರಭಾ ನದಿಗೆ ಅಡ್ಡಲಾಗಿ ಬೃಹತ್ ಗಾತ್ರದ ಸೇತುವೆ ಕಟ್ಟಲು ಸರಕಾರದವರು ಆಡಳಿತಾತ್ಮಕವಾಗಿ ಮಂಜೂರಾತಿ ನೀಡಿದ್ದಾರೆಯೆ?

ಆ) ಹಾಗಿದ್ದಲ್ಲಿ, ಶಂಕುಸ್ಥಾಪನೆಯ ನಂತರ ಆಗಿರುವ ಪ್ರಗತಿ ಎಷ್ಟು ಹಾಗೂ ಕಾರ್ಯಾರಂಭ ವನ್ನು ಯಾವಾಗ ಮಾಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು, ಆದರೆ ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಲ್ಲ, ಪ್ರಾಂತೀಯ ಹೆದ್ದಾರಿ.

ಆ) ಟೆಂಡರು ಕರೆದು ಗುತ್ತಿಗೆದಾರರನ್ನು ನೇಮಿಸಿದ ಮೇಲೆ ೮೭–೮೮ರ ಸಾಲಿನಲ್ಲಿ ಕಾರ್ಯಾರಂಭ ಮಾಡಲಾಗುವುದು.